ವಲಯ		(ರೂ. ಲಕ್ಷಗಳಲ್ಲಿ)
1.	ನೀರಾವರಿ ಕೇಂದ್ರ ವಲಯ, ಮುನಿರಾಬಾದ್	5325.91
2.	ನೀರಾವರಿ ಯೋಜನಾ ವಲಯ, ಗುಲ್ಬರ್ಗಾ	5573.58
3.	ತುಂಗಾ ಮೇಲ್ಪಂಡೆ ಯೋಜನಾ ವಲಯ, ಶಿವಮೊಗ್ಗ	1647.42
4.	ನೀರಾವರಿ (ದಕ್ಷಿಣ) ವಲಯ, ಮೈಸೂರು	15406.27
5.	ಹೇಮಾವತಿ ಯೋಜನಾ ವಲಯ, ಗೊರೂರು	3620.92
6.	ಹೇಮಾವತಿ ನಾಲಾ ವಲಯ, ತುಮಕೂರು	3773.24
	ಒಟ್ಟು:	35347.34

ದೊಡ್ಡಬಳ್ಳಾಪುರ ತಾಲ್ಲೂಕು ಗುಂಡಂಗೆರೆ ಬಳಿ ವಿದ್ಯುತ್ ಕೆ.ವಿ. ಸ್ಟೇಷನ್ ನಿರ್ಮಾಣ.

3060(3382)

ಶ್ರೀ ವಿ.ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ಗುಂಡಂಗೆರೆ ಬಳಿ ವಿದ್ಯುತ್ ಕೆ.ವಿ. ಸ್ಟೇಷನ್ ಮಂಜೂರಾತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಕೆ.ವಿ.ಸ್ಟೇಷನ್ ಮಂಜೂರಾಗಿದೆ ಹಾಗೂ ಯಾವ ಹಂತದಲ್ಲಿದೆ?

ಇ) ಸ್ಟೇಷನ್ ಪ್ರಾರಂಭಿಸುವುದು ಯಾವಾಗ? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಈ ವಿದ್ಯುತ್ ಉಪಕೇಂದ್ರದ ಸ್ಥಾಪನೆಯ ಪ್ರಸ್ತಾವನೆಗೆ ತಾಂತ್ರಿಕ ಸಮಿತಿಯು ಅನುಮೋದನೆ ನೀಡಿರುತ್ತದೆ.

ಆ ಮತ್ತು ಇ) ಇಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದು ಇನ್ನೂ ಪ್ರಾರಂಭಿಕ ಹಂತದಲ್ಲಿ ಇದೆ. ಆದುದರಿಂದ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ನಿಖರವಾಗಿ ಈಗಲೇ ತಿಳಿಸುವುದು ಕಷ್ಟಕರ.

ಈ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಗುರುತಿಸಿದ್ದು ಭೂಸ್ವಾಧೀನ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವ ಬಗ್ಗೆ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ದೊಡ್ಡಬಳ್ಳಾಪುರ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ಕಾರ್ಡುಗಳ ವಿತರಣೆ.

3061(3794)

ಶ್ರೀ ಕೃಷ್ಣಪ್ಪ ವಿ.(ದೊಡ್ಡಬಳ್ಳಾಪುರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ 2000-01ನೇ ಸಾಲಿನಲ್ಲಿ ವಿತರಣೆ ಮಾಡಲಾದ ಹಸಿರು ಪಡಿತರ ಚೀಟಿಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ನಗರ ಪ್ರದೇಶಗಳಲ್ಲಿ ಎಷ್ಟು ವಿತರಿಸಲಾಯಿತು? ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ವಿತರಿಸಲಾಯಿತು?

ಆ) ದೊಡ್ಡಬಳ್ಳಾಪುರ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 2000-01ನೇ ಸಾಲಿನಲ್ಲಿ ವಿತರಣೆ ಮಾಡಲಾದ ಹಸಿರು ಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) 2000-01ನೇ ಸಾಲಿನಲ್ಲಿ ವಿತರಿಸಿದ ಹಸಿರು ಪಡಿತರ ಚೀಟಿಗಳು:

1)	ನಗರ ಅನೌಪಚಾರಿಕ ಪಡಿತರ ಪ್ರದೇಶ	-	2833
2)	ಗ್ರಾಮಾಂತರ ಪ್ರದೇಶ	-	3320
	ಒಟ್ಟು		6153